**ದಿ: 13-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು: ಶ್ರೀ ಬಿ.ಹೆಚ್ ವಕೀಲರಿಂದ: -**

1. ದಾವಾ ಮನೆಯ ನಂಬರ್ ನನಗೆ ಗೊತ್ತಿಲ್ಲ. ದಾವಾ ಎರಡು ಪ್ಲಾಟ್‌ಗಳ ನಂಬರ್ ನನಗೆ ಗೊತ್ತಿಲ್ಲ. ಕಟ್ಟಿದ ಮನೆಯಲ್ಲಿ ಪ್ರತಿವಾದಿ ನಂಬರ್ 2 ಮತ್ತು 3 ರವರಿಗೂ ಭಾಗ ಇದೆ ಎಂದರೆ ಸರಿ. ದಾವಾ ಪ್ಲಾಟ್ ನಂಬರ್ 494 ಮತ್ತು 474 ಇವುಗಳನ್ನು 2ನೇ ಪ್ರತಿವಾದಿಯ ಗಂಡ ದುರಗಪ್ಪ ಸ್ವಂತ ಗಳಿಕೆಯಿಂದ ಖರೀದಿ ಮಾಡಿದ್ದರಿಂದ ಅವರ ಸ್ವಂತ ಆಸ್ತಿಯಾಗಿರುವುದರಿಂದ ನಿಮಗೆ ಭಾಗ ಕೇಳುವ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ತಂದೆ ಖರೀದಿ ಮಾಡಿದ್ದಾರೆಂದು ಹೇಳುತ್ತಾರೆ ಸಾಕ್ಷಿಗೆ ನಿನ್ನ ತಂದೆ ಯಾರಿಂದ ಖರೀದಿ ಮಾಡಿದ್ದು ಎಂದು ಸೂಚಿಸಿದ್ದು ಗೊತ್ತಿಲ್ಲ ಎನ್ನುತ್ತಾರೆ. ದಾವಾ ಹೊಲದಲ್ಲಿ ಮತ್ತು 2 ಪ್ಲಾಟ್‌ಗಳಲ್ಲಿ ನಿಮಗೆ ಭಾಗಾಂಶ ಬರಬೇಕಾಗಿಲ್ಲ ನೀವು ಸುಳ್ಳು ಕತೆ ಕಟ್ಟಿ ಸುಳ್ಳು ಸಾಕ್ಷಿ ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ. ದಾವೆ ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಯರಿಗೆ ನಾನು ಭಾಗಾಂಶ ಕೊಡಿ ಎಂದು ಊರಿನಲ್ಲಿ ನ್ಯಾಯಾ ಪಂಚಾಯಿತಿ ಮಾಡಿ ಕೇಳಿರುವುದಿಲ್ಲ.

2. 2ನೇ ಪ್ರತಿವಾದಿ ತನ್ನ ಗಂಡನ ಚಿಕಿತ್ಸೆಗೆ ರೂ 8 ಲಕ್ಷ ಕೈಗಡ ಸಾಲ ಮಾಡಿ ಆ ಸಾಲವನ್ನು ಪ್ರತಿವಾದಿಯರು ತಿರಿಸಿರುತ್ತಾರೆ ಎಂದರೆ ಸಾಕ್ಷಿಯು ಸಾಲ ಆಗಿಲ್ಲ ಎಂದು ಹೇಳುತ್ತಾರೆ. ನಿಮ್ಮ ವಾದ ಪತ್ರದಲ್ಲಿ ನಿಮ್ಮ ಅಣ್ಣನ ಚಿಕಿತ್ಸೆಗಾಗಿ ನೀವು ಕೂಲಿ ನಾಲಿ ಮಾಡಿ ಪಾವತಿ ಮಾಡಿದ್ದಿರಾ ಎಂದು ಹೇಳಿ ಬರೆಸಿದ್ದಿರಾ ಎಂದರೆ ಸಾಕ್ಷಿಯು ಬರೆಸಿರಬಹುದು ಎನ್ನುತ್ತಾರೆ. ಈ ರಿತಿ ನಿಮ್ಮ ವಾದ ಪತ್ರದಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ದಾವಾ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ